ಶಹಾಪುರ ತಾಲ್ಲೂಕಿನ ಭೀಮರಾಯನ ಗುಡಿಯಲ್ಲಿ ನವೋದಯ ಶಾಲೆ

೩೬೬. ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಭೀಮರಾಯನ ಗುಡಿಯಲ್ಲಿ ನವೋದಯ ಶಾಲೆಯನ್ನು ಪ್ರಾರಂಭಿಸಿರುವುದು ನಿಜವಲ್ಲವೆ.

ಆ) ಇದಕ್ಕೆ ಬೇಕಾದ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಆಯ್ಕೆ ಮಾಡಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ, ಸದರಿ ಜಮೀನನ್ನು ನವೋದಯ ಶಾಲೆಗೆ ವಹಿಸಿ ಕೊಡುವಲ್ಲಿ ಸರಕಾರಕ್ಕೆ ಇರುವ ತೊಂದರೆಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಆಯ್ಕೆ ಮಾಡಿರುವ ಭೂಮಿಯು ಅರಣ್ಯ ಇಲಾಖೆಗೆ ಸೇರಿರುತ್ತದೆ. ಆದಕಾರಣ ಕೇಂದ್ರ ಸರ್ಕಾರದ ಅನುಮತಿಯು ಅಗತ್ಯವಿದೆ, ಕೇಂದ್ರಕ್ಕೆ ಈ ಬಗ್ಗೆ ಪತ್ರ ಬರೆದಿದ್ದೂ ಅನುಮತಿಯೂ ಸದ್ಯದಲ್ಲೇ ದೊರಕುವುದೆಂದು ನೀರೀಕ್ಷಿಸಲಾಗಿದೆ.

ಶ್ರೀ ಶಿವಶೇಖರಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗಳು ನಿಜವೆಂದೂ ಹಾಗೂ ಕೇಂದ್ರ ಸರ್ಕಾರಕ್ಕೆ ಅನುಮತಿಗಾಗಿ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಈ ಶಾಲೆಗೆ ಜಮೀನು ವಹಿಸಿ ಕೊಡುವುದರ ಬಗ್ಗೆ ೨ ವರ್ಷಗಳಿಂದಲೂ ವಿಳಂಬವಾಗುತ್ತಿರಲು ಕಾರಣವೇನು ? ಶಾಲೆ ಪ್ರಾರಂಭವಾಗಿ ೨ ವರ್ಷಗಳಾಗಿದ್ದರೂ ಭೂಮಿ ಕೊಡದಿರಲು ಕಾರಣವೇನು ? ಕೇಂದ್ರದವರು ಈಗಾಗಲೇ ೨ ಕೋಟಿ ರೂಪಾಯಿಗಳ ಪ್ಲಾನ್ ತಯಾರು ಮಾಡಿದ್ದು ಇಲ್ಲಿಗೆ ೨೦ ಲಕ್ಷ ರೂಪಾಯಿ ಕೊಡಲು ತಯಾರಿದ್ದಾರೆ ಈ ಹಣ ವಾಪಸ್ಸು ಹೋಗುವುದಕ್ಕೆ ಬಿಡದೇ ಇದನ್ನು ಉಪಯೋಗಿಸಿಕೊಳ್ಳಬೇಕಾಗುತ್ತೆದೆ ಸರ್ಕಾರ ಆದಷ್ಟು ಬೇಗ ಅನುಮತಿ ತರಿಸಿಕೊಂಡು ಕೆಲಸ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಅವರಿಗೆ ಸುಮಾರು ೩೦ ಎಕರೆ ಜಮೀನು ಬೇಕಾಗಿದ್ದು ಬೇರೆ ಕಡೆ ಜಮೀನು ಸಿಗದೇ ಇರುವುದರಿಂದ ಅರಣ್ಯ ಇಲಾಖೆಯ ಜಮೀನನ್ನು ತೆಗೆದುಕೊಂಡು ಇವರಿಗೆ ಕೊಡಬೇಕೆಂದು ಇಚ್ಛೆ ಇದ್ದು ಈಗ ಕೇಂದ್ರಸರ್ಕಾರದವರ ಜೊತೆ ಸಂಪರ್ಕ ಮಾಡಿದ್ದೇವೆ. ಅವರಿಂದ ಒಪ್ಪಿಗೆ ಸಿಗುವ ಸೂಚನೆಗಳು ಇರುವುದರಿಂದ ಆದಷ್ಟು ಬೇಗ ಪ್ರಯತ್ನ ಮಾಡಿ ಕೆಲಸ ಮಾಡೋಣವೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಜ್ಞಾನದೇವ ದೊಡ್ಡಮೇಟಿಯವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದು ಅದನ್ನು ನೀಡಲಾಗಿದೆ. ಮಾನ್ಯ ಓಂಕಾರ ಎಂ.ಆರ್ತಿಯವರು ಗೈರುಹಾಜರಾಗಿದ್ದಾರೆ. ಈಗ ಮಾನ್ಯ ರಾಜೂಗೌಡರು ತಮ್ಮ ಪ್ರಶ್ನೆ ಕೇಳಬಹುದು.

ಅರಣ್ಯ ಇಲಾಖೆಯವರು ಕಳ್ಳ ಸಾಗಣಿಕೆಯಿಂದ ವಶಪಡಿಸಿಕೊಂಡ ವಾಹನಗಳು

೩೬೭. ಶ್ರೀ ಬಿ. ರಾಜೂಗೌಡ (ಹನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭, ೮೭-೮೮ ಮತ್ತು ೧೯೮೮-೮೯ರ ಜನವರಿವರೆಗೆ ರಾಜ್ಯದಲ್ಲಿ ಎಷ್ಟುವೆಲ್ಲದ ಗಂಧದ ಕಟ್ಟಿಗೆಯನ್ನು ಯಾವ ಯಾವ ಜಿಲ್ಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಯವರು ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡಿದ್ದಾರೆ ?

ಆ) ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡ ವಾಹನಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಡಿಸೆಂಬರ್ ೮೮ರವರೆಗೆ ವಿವರಗಳನ್ನು ಪಟ್ಟಿಯಲ್ಲಿ ನಮೂದಿಸಿದೆ.

ಆ) ಡಿಸೆಂಬರ್ ೮೮ರವರೆಗೆ ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ನಮೂದಿಸಿದೆ.